# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 151 | Pages. 2 | Date: 21-05-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 151 – ಪುಟಗಳು : 2 | 21-05-2026 | ಗುರುವಾರ | Ph: 8762954248 | ದರ : ₹1


## ವಿದ್ಯುತ್ ತೊಡಕು: 55 ಕುಡಿಯುವ ನೀರಿನ ಯೋಜನೆ ಅಪೂರ್ಣ

### 76 ಲಕ್ಷ ರೂ. ಪಾವತಿಸಿದ್ದರೂ ಸಂಪರ್ಕ ವಿಳಂಬ: ಶಾಸಕ ಸಿಮೆಂಟ್ ಮಂಜು ಆಕ್ರೋಶ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿದ್ಯುತ್ ಇಲಾಖೆಯ ತಾಂತ್ರಿಕ ತೊಡಕುಗಳಿಂದ ತಾಲೂಕಿನ ಕುಡಿಯುವ ನೀರಿನ ಯೋಜನೆಗಳ ಪ್ರಗತಿ ಕುಂಠಿತವಾಗಿದ್ದು, ಬೇಸಿಗೆ ಸಂದರ್ಭದಲ್ಲಿ ಜನರಿಗೆ ನೀರಿನ ಸಮಸ್ಯೆ ಎದುರಾಗುವ ಆತಂಕ ಉಂಟಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಬುಧವಾರ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಸೂಚನೆಯಂತೆ ಮೇ 26ರ ಒಳಗೆ ಕುಡಿಯುವ ನೀರಿನ ಕಾಮಗಾರಿ ಪೂರ್ಣಗೊಳಿಸಬೇಕಾಗಿದೆ. ಆದರೆ, ಮೂರು ತಿಂಗಳ ಹಿಂದೆಯೇ ಕಾಮಗಾರಿ ಪೂರ್ಣಗೊಂಡಿದ್ದರೂ ವಿದ್ಯುತ್ ಸಂಪರ್ಕ ಸಿಗದೆ ಹಲವಾರು ಯೋಜನೆಗಳು ಸ್ಥಗಿತಗೊಂಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ಸರ್ಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡಿರುವ ಕುಟುಂಬಗಳಿಗೆ ಗ್ರಾಮ ಪಂಚಾಯಿತಿಗಳ ಪರವಾನಗಿ ಇಲ್ಲದ ಕಾರಣ ವಿದ್ಯುತ್ ಇಲಾಖೆ ಸಂಪರ್ಕ ನೀಡಲು ನಿರಾಕರಿಸುತ್ತಿದೆ. ಇದರ ಪರಿಣಾಮ ಅನೇಕ ಕುಟುಂಬಗಳು ಇನ್ನೂ ಕತ್ತಲಲ್ಲೇ ಬದುಕು ನಡೆಸುವಂತಾಗಿದೆ.
>
> **– ಸಿಮೆಂಟ್ ಮಂಜು, ಶಾಸಕ**

ತಾಲೂಕಿನಲ್ಲಿ 87 ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ 55 ಕಾಮಗಾರಿ ಭೌತಿಕ ಪ್ರಗತಿ ಬಹುತೇಕ ಪೂರ್ಣಗೊಂಡಿದೆ. ಈ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಇಲಾಖೆಗೆ ಈಗಾಗಲೇ ಸುಮಾರು 76 ಲಕ್ಷ ರೂ. ಪಾವತಿಸಲಾಗಿದೆ. ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಸಂಪರ್ಕ ನೀಡುವಲ್ಲಿ ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಈ ಕುರಿತು ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ಹಲವು ಬಾರಿ ಚರ್ಚೆ ನಡೆಸಿದರೂ ಸ್ಪಂದನೆ ಸಿಕ್ಕಿಲ್ಲ. ಬೇಸಿಗೆ ಹಿನ್ನೆಲೆ ತಾಲೂಕಿನ 10 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಸುಮಾರು 22 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುವ ಸಾಧ್ಯತೆ ಇದ್ದು, ತಕ್ಷಣವೇ ಕಾಮಗಾರಿ ಪೂರ್ಣಗೊಂಡ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಇನ್ನೂ ಪ್ರಗತಿ ಹಂತದಲ್ಲಿರುವ 32 ಕಾಮಗಾರಿಗಳಿಗೆ ವಿದ್ಯುತ್ ಇಲಾಖೆಗೆ ಹಣ ಪಾವತಿಸಬೇಕಿರುವುದಾಗಿ ತಿಳಿಸಿದರು.

ಗ್ರಾಮ ಪಂಚಾಯಿತಿ ಪರವಾನಗಿ ಇಲ್ಲದ ನೆಪದಲ್ಲಿ ಮೂಲಭೂತ ಸೌಲಭ್ಯಗಳಿಂದ ಜನರನ್ನು ವಂಚಿಸಲಾಗುತ್ತಿದ್ದು, ಹಲವು ಕುಟುಂಬಗಳು ಕಾಡುಮಾನವರಂತೆ ಜೀವನ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಸಮಸ್ಯೆಯನ್ನು ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸ್ಥಳೀಯ ಗುತ್ತಿಗೆದಾರರಿಗೆ ಆದ್ಯತೆ ನೀಡಿ

ಸ್ಥಳೀಯ ವಿದ್ಯುತ್ ಗುತ್ತಿಗೆದಾರರಿಗೆ ವಿದ್ಯುತ್ ಕಾಮಗಾರಿಗಳಲ್ಲಿ ಮೊದಲ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿ ತಾಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸಿಮೆಂಟ್ ಮಂಜು ಅವರಿಗೆ ಮನವಿ ಸಲ್ಲಿಸಿದರು.

ಸಭೆಯಲ್ಲಿ ಗುತ್ತಿಗೆದಾರರು, ಸೆಸ್ಕಾಂ, ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಪುರಸಭೆ ವ್ಯಾಪ್ತಿಯ ವಿದ್ಯುತ್ ಕಾಮಗಾರಿಗಳು ಬಹುತೇಕ ಹೊರಭಾಗದ ಗುತ್ತಿಗೆದಾರರ ಪಾಲಾಗುತ್ತಿವೆ ಎಂದು ಆರೋಪಿಸಿದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮನಾಥ್ ಮಾತನಾಡಿ, ಪ್ರಸ್ತುತ ತಾಲೂಕಿನ ಸೆಸ್ಕಾಂ ಇಲಾಖೆಯಡಿ 36 ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದ ವಿದ್ಯುತ್ ಕಾಮಗಾರಿಗಳು ನಡೆಯುತ್ತಿವೆ. ಆದರೆ, ಹೆಚ್ಚಿನ ಕೆಲಸಗಳನ್ನು ಹೊರಭಾಗದ ಗುತ್ತಿಗೆದಾರರಿಗೆ ನೀಡಲಾಗುತ್ತಿದ್ದು, ಸ್ಥಳೀಯ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು.



ಈ ವೇಳೆ ಪ್ರತಿಕ್ರಿಯಿಸಿದ ಸೆಸ್ಕ್ ಎಇಇ ಹರೀಶ್, ಏಪ್ರಿಲ್ 27ರಂದು ಸ್ಥಳೀಯ ಗುತ್ತಿಗೆದಾರರ ಸಭೆ ನಡೆಸಿ, 36 ಕಾಮಗಾರಿಗಳನ್ನು ನಿರ್ವಹಿಸಲು ಸಿದ್ಧರಾಗಿರುವ ಗುತ್ತಿಗೆದಾರರ ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಮೂರು ವಾರಗಳಾದರೂ ಪಟ್ಟಿಯನ್ನು ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಂದಿನ ದಿನಗಳಲ್ಲಿ ಮಳೆಗಾಲ ಆರಂಭವಾಗಲಿರುವುದರಿಂದ ಕಾಮಗಾರಿಗಳನ್ನು ವಿಳಂಬ ಮಾಡಲಾಗುವುದಿಲ್ಲ. ಅಗತ್ಯವಿದ್ದಲ್ಲಿ ಹೊರಭಾಗದ ಗುತ್ತಿಗೆದಾರರ ಮೂಲಕವೂ ಕೆಲಸ ಮಾಡಿಸುವ ಅನಿವಾರ್ಯತೆ ಎದುರಾಗುತ್ತದೆ ಎಂದು ಹೇಳಿದರು.

ಈ ಸಂದರ್ಭ ಭಾವುಕರಾಗಿ ಮಾತನಾಡಿದ ಅವರು, ಕಚೇರಿಯಲ್ಲಿ ಕೆಲಸ ನಿರ್ವಹಿಸುವುದೇ ಕಷ್ಟಕರವಾಗುತ್ತಿದೆ. ಕೆಲವರು ಮಾಹಿತಿ ಹಕ್ಕು ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಅಧಿಕಾರಿಗಳಿಗೆ ಮಾನಸಿಕ ಒತ್ತಡ ತರುತ್ತಿದ್ದಾರೆ. ಹೊರಭಾಗದ ಅಧಿಕಾರಿಗಳಿಗೆ ದಾಖಲೆಗಳನ್ನು ಸುಲಭವಾಗಿ ನೀಡುವ ಗುತ್ತಿಗೆದಾರರು, ಸ್ಥಳೀಯ ಅಧಿಕಾರಿಗಳನ್ನು ಮಾತ್ರ ಲಘುವಾಗಿ ಕಾಣುತ್ತಾರೆ. ಕಾನೂನು ಪಾಲನೆ ಮಾಡುವುದೇ ಕೆಲವರಿಗೆ ತೊಂದರೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಹೊಂದಾಣಿಕೆ ಇಲ್ಲದ ಸ್ಥಳದಲ್ಲಿ ಇಂತಹ ಸಮಸ್ಯೆಗಳು ಉದ್ಭವಿಸುತ್ತವೆ. ಇಲಾಖೆಯ ಮಾನದಂಡಗಳನ್ನು ಆಧಾರವಾಗಿ ತೆಗೆದುಕೊಂಡು ಸ್ಥಳೀಯ ಗುತ್ತಿಗೆದಾರರಿಗೆ ಮೊದಲ ಆದ್ಯತೆಯಲ್ಲಿ ಕೆಲಸ ನೀಡಬೇಕು. ಜೊತೆಗೆ ಕಾಮಗಾರಿ ಗುಣಮಟ್ಟ ಹಾಗೂ ಸಮಯ ಪಾಲನೆಯೂ ಕಡ್ಡಾಯವಾಗಬೇಕು ಎಂದು ಸೂಚಿಸಿದರು.

## ಹಸಿ-ಒಣ ಕಸ ಬೇರ್ಪಡಿಸಿ ನೀಡಲು ಸೂಚನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ಕಡ್ಡಾಯವಾಗಿ ಬೇರ್ಪಡಿಸಿ ವಾಹನಗಳಿಗೆ ನೀಡುವ ಕುರಿತು ಸಾರ್ವಜನಿಕರಿಗೆ ಹೆಚ್ಚಿನ ತಿಳಿವಳಿಕೆ ನೀಡಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ಮಾತನಾಡಿ, ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಮತ್ತಿತ್ತರ ಸ್ಥಳಗಳಲ್ಲಿ ವಿಲೇವಾರಿ ಮಾಡುವವರನ್ನು ಗುರುತಿಸಿ ಶಿಸ್ತು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ತ್ಯಾಜ್ಯ ವಿಲೇವಾರಿ ವ್ಯವಸ್ಥಿತವಾಗಿ ಆಗಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಎಸೆಯದಂತೆ ಅರಿವು ಮೂಡಿಸಲು ಹೆಚ್ಚಿನ ಐ.ಇ.ಸಿ ಚಟುವಟಿಕೆ ಏರ್ಪಡಿಸುವಂತೆ ತಿಳಿಸಿದರು.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು. ಮುಂಜಾಗ್ರತೆ ವಹಿಸಿ ಸಿದ್ಧತೆ ಕೈಗೊಳ್ಳಬೇಕು. ನಗರಗಲ್ಲಿ ಪಾದಚಾರಿ ಮಾರ್ಗ ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಉದ್ಯಾವನಗಳಲ್ಲಿ ಹೆಚ್ಚಿನ ಗಿಡಮರಗಳನ್ನು ಬೆಳೆಸಲು ಕ್ರಮಹಿಸಬೇಕು ಹಾಗೂ ನಗರಗಳಲ್ಲಿ ಪಾರ್ಕಿಂಗ್ ಸ್ಥಳ ನಿಗದಿ ಪಡಿಸಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಬೇಕು. ಜಿಲ್ಲೆಯಲ್ಲಿನ ಪ್ರವಾಸಿ ಸ್ಥಳಗಳಲ್ಲಿ ಹಿರಿಯ ನಾಗರೀಕರಿಗೆ, ಮಹಿಳೆಯರಿಗೆ, ಅಂಗವಿಕಲರಿಗೆ ಶೌಚಾಲಯ ನಿರ್ಮಾಣಬೇಕು ಎಲ್ಲಾ ರೀತಿಯ ಅನುಕೂಲವಿರು ವಂತೆ ಕ್ರಮವಹಿಸಲು ನಿರ್ದೇಶನ ನೀಡಿದರು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಶಾಲೆಗಳು ಇ-ಖಾತಾ ಮಾಡಿಸಬೇಕು. ಶಿಕ್ಷಣ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ಖಾತೆಗೆ ಬಾಕಿಯಿರುವುದನ್ನು ಪೂರ್ಣಗೊಳಿಸಲು ಸೂಚನೆ ನೀಡಿದರು.

ಹಸಿರು ಹಾಸನ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳಿಗೂ ಸಹ ಅವಕಾಶ ಕಲ್ಪಿಸಿ ಶಾಲೆಗಳ ಆವರಣಗಳಲ್ಲಿ ಗಿಡಗಳ ನೆಟ್ಟು ಬೆಳೆಸಬೇಕು ಹಾಗೂ ಶಾಲೆಯ ಪ್ರತಿಯೊಂದು ಮಕ್ಕಳ ಹೆಸರನ್ನು ಒಂದೊಂದು ಗಿಡಕ್ಕಿಟ್ಟು ಪೋಷಣೆಗೆ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

## ಗಂಡಸಿ ಹ್ಯಾಂಡ್‌ಪೋಸ್ಟ್‌ನಲ್ಲಿ ದೇವೇಗೌಡರ ಪುತ್ಥಳಿಗೆ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲೂಕಿನ ಗಂಡಸಿ ಹ್ಯಾಂಡ್ ಪೋಸ್ಟ್‌ನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಕಂಚಿನ ಪುತ್ಥಳಿ ನಿರ್ಮಿಸಬೇಕು ಎಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಗಂಡಸಿ ಸಂತೆಯಲ್ಲಿ ನೀರು-ಮಜ್ಜಿಗೆ ಮಾರಾಟ ಮಾಡಿಕೊಂಡಿದ್ದ ಶಿವಲಿಂಗೇಗೌಡ ಅವರನ್ನು ದೇವೇಗೌಡರು ಶಾಸಕನನ್ನಾಗಿಸಿ ಬೆಳೆಸಿದ್ದಾರೆ. ಆದ್ದರಿಂದ ಅವರ ಪುತ್ಥಳಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಜಿಲ್ಲಾಡಳಿತ ಅಥವಾ ತಾಲ್ಲೂಕು ಆಡಳಿತ ಕ್ರಮ ಕೈಗೊಳ್ಳದಿದ್ದರೆ ದೇವೇಗೌಡರ ಅಭಿಮಾನಿಗಳೇ ಮನೆ ಮನೆಯಿಂದ ಹಣ ಸಂಗ್ರಹಿಸಿ ಕಾಮಗಾರಿ ಕೈಗೆತ್ತಿಕೊಳ್ಳುತ್ತೇವೆ ಎಂದರು.




ರೈತರ ಬಗ್ಗೆ ಕಾಳಜಿ ತೋರಿಸಿ: ಬೆಂಗಳೂರಿನಲ್ಲಿ ಕುಳಿತು ಇಂಧನ ಬೆಲೆ ಏರಿಕೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲಹೆ ನೀಡುತ್ತಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡರು ಅದೇ ಕಾಳಜಿಯನ್ನು ಕ್ಷೇತ್ರದ ರೈತರ ಪರವಾಗಿ ತೋರಿಸಬೇಕೆಂದು ಛೇಡಿಸಿದರು.

ಪಶ್ಚಿಮ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಇಂಧನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಅದರ ಬಗ್ಗೆ ತಲೆ ಕೆಡಿಸಿಕೊಂಡಿರುವ ಶಿವಲಿಂಗೇಗೌಡರಿಗೆ ಅರಸೀಕೆರೆಯಲ್ಲಿ ವಿದ್ಯುತ್ ಪರಿವರ್ತಕ ಇಲ್ಲದೆ ರೈತರು ಪರದಾಡುತ್ತಿರುವುದು, ರಾಗಿ ಖರೀದಿ ಕೇಂದ್ರದಲ್ಲಾಗುತ್ತಿರುವ ಭ್ರಷ್ಟಾಚಾರ ಕಣ್ಣಿಗೆ ಕಾಣಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಶಾಸಕರು ಇತ್ತೀಚೆಗೆ ಬೆಂಗಳೂರು ಸೇರಿದ್ದಾರೆ. ಯಾವಾಗಲಾದರೊಮ್ಮೆ ಕ್ಷೇತ್ರಕ್ಕೆ ಬಂದು ಹೋಗುತ್ತಾರೆ. ನಾಲ್ಕು ಸಲ ಮತ ನೀಡಿರುವ ಜನರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ತಾಲ್ಲೂಕಿನಲ್ಲಿ 63 ಕೆ.ವಿ. ಸಾಮರ್ಥ್ಯದ 15, 100 ಕೆ.ವಿ.ಯ 15, 23 ಕೆ.ವಿ. ಸಾಮರ್ಥ್ಯ 18 ವಿದ್ಯುತ್ ಪರಿವರ್ತಕಗಳ ಅವಶ್ಯಕತೆಯಿದೆ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ಜಾನುವಾರುಗಳ ಮೇವಿಗೆ ಭಾರೀ ಸಮಸ್ಯೆಯಾಗಿದೆ. ನೀರಿನ ಅಭಾವದಿಂದ ತೆಂಗು, ಅಡಿಕೆ, ರಾಗಿ ಬೆಳೆಗೆ ತೊಂದರೆಯುಂಟಾಗಿದೆ ಎಂದರು.

ನಫೇಡ್ ಮೂಲಕ ರಾಗಿ ಖರೀದಿ ಮಾಡಲಾಗುತ್ತಿದೆಯಾದರೂ ಅಲ್ಲಿ ನಡೆಯುತ್ತಿರುವ ಅಕ್ರಮಕ್ಕೆ ರೈತರು ಬೇಸತ್ತಿದ್ದಾರೆ. ಎಪಿಎಂಸಿ ಒಳಗೆ ಕಾಲಿಡಬೇಕೆಂದರೂ ಕಾವಲುಗಾರನಿಗೆ 100 ರೂ. ಲಂಚ ಕೊಡಲೇಬೇಕು. ಶಾಸಕ ಶಿವಲಿಂಗೇಗೌಡ ಅವರನ್ನು ರಾಗಿ ಕಳ್ಳ ಎಂದು ಕರೆಯಲು ಇದೇ ಕಾರಣ. ಆದ್ದರಿಂದ ಅವರ ರಾಗಿ ಖರೀದಿ ಪ್ರಕ್ರಿಯೆಯನ್ನು ಸಿಬಿಐ ತನಿಖೆಗೆ ವಹಿಸಿ ಆರೋಪ ಮುಕ್ತರಾಗಲಿ ಎಂದು ಸವಾಲೆಸೆದರು.

ಮುಖಂಡರಾದ ಮಹಾಲಿಂಗಣ್ಣ, ಭಾಸ್ಕರ್, ಉಮೇಶ್, ಬೋಜಾನಾಯ್ಕ, ಅಮ್ಮನಟ್ಟಿ ಅಜ್ಜಪ್ಪ ಹಾಜರಿದ್ದರು.

## ಪತ್ರಕರ್ತರ ಸಮರ್ಪಣಾ ಭಾವದಿಂದ ಕ್ರೀಡಾಕೂಟ ಯಶಸ್ಸು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತ್ರಕರ್ತರ ಸಮರ್ಪಣಾ ಭಾವದಿಂದ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಪತ್ರಕರ್ತರು-ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಯಶಸ್ವಿಯಾಗಿದೆ ಎಂದು ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ಪತ್ರಕರ್ತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಮಾದರಿ ಕ್ರೀಡಾಕೂಟ ಆಯೋಜಿಸಬೇಕೆನ್ನುವುದು ನಮ್ಮ ಉದ್ದೇಶವಾಗಿತ್ತು. ಯಾವುದೇ ಲೋಪದೋಷಗಳು ಆಗದಂತೆ ಕ್ರೀಡಾ ಸಮಿತಿ ರಚಿಸಿ ಪ್ರತಿಯೊಬ್ಬರಿಗೂ ಜವಾಬ್ದಾರಿ ನೀಡಲಾಗಿತ್ತು. ಊಟ-ಉಪಾಹಾರ ನಿರ್ವಹಣೆಯನ್ನು ಎಂ.ಎಸ್.ಸ್ವಾಗತ್ ಮತ್ತವರ ತಂಡ ನಿರ್ವಹಿಸಿತು. ಪಿಚ್ ಜವಾಬ್ದಾರಿಯನ್ನು ಸಾಗರ್, ಶರತ್ ಹಾಗೂ ಇತರರಿಗೆ ವಹಿಸಲಾಗಿತ್ತು. ನಟರಾಜ್ ಅವರು ಫ್ಲೆಕ್ಸ್, ಸ್ವಚ್ಛತೆಯನ್ನು ಗಮನಿಸಿದರು.




ಸಂಘಟಿತರಾಗಿ ಮಾಡುವ ಕೆಲಸ ಯಶಸ್ಸು ತಂದುಕೊಡುತ್ತವೆ ಎಂಬುದಕ್ಕೆ ಕ್ರಿಕೆಟ್ ಪಂದ್ಯಾವಳಿ ನಿದರ್ಶನ ಎಂದರು.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ಎರಡು ದಿನಗಳ ಕ್ರೀಡಾಕೂಟ ಅಚ್ಚುಕಟ್ಟಾಗಿ ನಡೆಯಿತು. ವಹಿಸಿದ ಕೆಲಸವನ್ನು ಎಲ್ಲರೂ ಉತ್ತಮವಾಗಿ ನಿರ್ವಹಿಸಿದರು. ಮುಂದೆಯೂ ಕ್ರೀಡಾಕೂಟಗಳನ್ನು ಇದೇ ಮಾದರಿಯಲ್ಲಿ ಹಮ್ಮಿಕೊಳ್ಳೋಣ ಎಂದರು.

ಉಪಾಧ್ಯಕ್ಷ ಎನ್.ನಂಜುಂಡೇಗೌಡ ಮಾತನಾಡಿ, ಕ್ರಿಕೆಟ್ ಸಮ್ಮಿಲನ ಯಶಸ್ವಿಯಾಗಿ ನಡೆದಿದೆ. ಹಿಂದೆ ಈ ರೀತಿಯ ಕ್ರೀಡಾಕೂಟ ನಡೆದಿರಲಿಲ್ಲ ಎಂದು ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಶ್ರೇಯಸ್ಸಿಗೆ ಕ್ರೀಡಾ ಸಮಿತಿಯ ಎಲ್ಲರೂ ಕಾರಣ. ಮುಂದೆ ಪರಿಸ್ಥಿತಿ ನೋಡಿಕೊಂಡು ಪ್ರತಿವರ್ಷ ಮುಂದುವರಿಸಿಕೊಂಡು ಹೋಗೋಣ ಎಂದರು. ಮತ್ತೊಬ್ಬ ಉಪಾಧ್ಯಕ್ಷ ಜಿ.ಪ್ರಕಾಶ್ ಅವರು ಮಾತನಾಡಿ, ಕಡಿಮೆ ಅವಧಿಯಲ್ಲಿ ರಾಜ್ಯಮಟ್ಟದ ಸ್ಪರ್ಧೆ ರೀತಿಯಲ್ಲೇ ಕ್ರೀಡಾಕೂಟ ಯಶಸ್ವಿಗೊಳಿಸಿದ್ದು, ಎಲ್ಲಾ ಅಧಿಕಾರಿಗಳು ಭಾಗಿಯಾಗಿದ್ದು ಮಾದರಿಯಾಗಿದೆ ಎಂದರು.

ಕಾರ್ಯದರ್ಶಿ ಕೆ.ಎಂ. ಹರೀಶ್ ಮಾತನಾಡಿ, 16 ಇಲಾಖೆಗಳ ತಂಡಗಳನ್ನು ಒಂದೆಡೆ ಸೇರಿಸಿದ್ದಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಣಜಿ ಮಾದರಿ ಪಂದ್ಯ ಆಯೋಜಿಸಲಾಗಿತ್ತು ಎಂದು ಅನೇಕರು ಹೊಗಳಿದರು. ಇದು ನಮಗೆ ಸ್ಫೂರ್ತಿ ತಂದಿದೆ. ಕ್ರೀಡಾ ಸಮಿತಿಯವರು ತಮ್ಮ ಮನೆಯ ಕೆಲಸದಂತೆ ಸಂಘಟನಾತ್ಮಕವಾಗಿ ಕೆಲಸ ಮಾಡಿದ್ದರಿಂದ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ ಎಂದರು.

ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಮಾತನಾಡಿ, ಇದು ನಿಜಕ್ಕೂ ಮಾದರಿ ಕ್ರೀಡಾಕೂಟ, ಆಯೋಜನೆ ಬಗ್ಗೆ ಪ್ರಶಂಸೆಯ ಮಾತುಗಳು ಕೇಳಿ ಬಂದವು, ಮುಂದೆ ಇದೇ ರೀತಿ ಸಾಗೋಣ ಎಂದರು.

ಕ್ರೀಡಾ ಸಮಿತಿ ಸಂಚಾಲಕ ಪ್ರಕಾಶ್ ಬೆಳವಾಡಿ ಮಾತನಾಡಿ, ಮೊದಲ ಬಾರಿಗೆ ಕ್ರಿಕೆಟ್ ಸಮ್ಮಿಲನವನ್ನು ಯಶಸ್ವಿಗೊಳಿಸಿದ್ದು ಸಂತಸ ತರಿಸಿದೆ. ಈ ರೀತಿಯ ಪಂದ್ಯಾವಳಿ ಯಾರೂ ಮಾಡಿರಲಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿದರು. ಕ್ರೀಡಾಕೂಟ ಯಶಸ್ಸಿಗೆ ಶ್ರಮಿಸಿದ ಕ್ರೀಡಾ ಸಮಿತಿಯ ಎಲ್ಲರನ್ನೂ ಅಭಿನಂದಿಸಲಾಯಿತು.

## ಯರೇಹಳ್ಳಿಯಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಯರೇಹಳ್ಳಿ ಗ್ರಾಮದಲ್ಲಿ ಕೈಗೊಂಡಿರುವ 40 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಬುಧವಾರ ಭೂಮಿಪೂಜೆ ನೆರವೇರಿಸಿದರು. ಕೆಆರ್‌ಐಡಿಎಲ್ ಅನುದಾನದಡಿ ಕಾಮಗಾರಿ ಕೈಗೊಳ್ಳಲಾಗಿದೆ.

ಈ ವೇಳೆ ಮಾತನಾಡಿದ ಶಾಸಕರು, ಆದಷ್ಟು ಬೇಗ ಕಾಮಗಾರಿ ಮುಗಿಸಿ ಜನರ ಓಡಾಟಕ್ಕೆ ಅನುಕೂಲ ಕಲ್ಪಿಸಲು ಅಧಿಕಾರಿ ಹಾಗು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಯರೇಹಳ್ಳಿ ಗ್ರಾಮದ ಇನ್ನಷ್ಟು ಸಮಸ್ಯೆಗಳ ಕುರಿತು ಸ್ಥಳೀಯರು ಗಮನಕ್ಕೆ ತಂದಿದ್ದಾರೆ. ಹಂತ ಹಂತವಾಗಿ ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ನಂತರ ಹಾಸನ ವಿಧಾನಸಭಾ ಕ್ಷೇತ್ರದ ಕಡಗ ಗ್ರಾಮದಲ್ಲಿ ನಿರ್ಮಿಸಿರುವ ಅಂಗನವಾಡಿ ಕಟ್ಟಡವನ್ನು ಮಕ್ಕಳ ಕೈಯಿಂದಲೇ ಉದ್ಘಾಟಿಸುವ ಮೂಲಕ ಶಾಸಕರು ಮಾದರಿಯಾದರು. ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಕ್ಕಳಿಗೆ ಸುಸಜ್ಜಿತ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಿ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಶ್ರಮ ವಹಿಸಲಾಗುತ್ತಿದೆ ಎಂದರು.

ಗ್ರಾಮಸ್ಥರು, ಪಕ್ಷದ ಮುಖಂಡರು ಹಾಜರಿದ್ದರು.

## ಡಿ.ಕೆ.ಶಿವಕುಮಾರ್‌ಗೆ ತಳಮಳ ಶುರು: ನಿಖಿಲ್ ವ್ಯಂಗ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬಿಡದಿ ಟೌನ್ ಶಿಪ್ ಯೋಜನೆ ವಿರೋಧಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾತನಾಡಿದ್ದಕ್ಕೆ ಡಿ.ಕೆ.ಶಿವಕುಮಾರ್‌ಗೆ ತಳಮಳ ಶುರುವಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಬೆಂಗಳೂರಿನ ಕಚೇರಿಯಲ್ಲಿ ರೈತರ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಕೋರರಲು, ದಲ್ಲಾಳಿಗಳು ಮತ್ತು ಕಾಂಗ್ರೆಸ್ ಏಜೆಂಟರೊಂದಿಗೆ ಸಭೆ ಮಾಡಿದ್ದಾರೆ. ಸಭೆಯಲ್ಲಿ ಭಾಗವಹಿಸಿದ




ಮುಖಗಳು ನಿಜವಾಗಿಯೂ ರೈತರನ್ನು ಹೋಲುತ್ತಿದ್ದವೇ. ಅಲ್ಲಿದ್ದ ಒಬ್ಬನ್ನೂ ಹಸಿರು ಟವೆಲ್ ಹಾಕಿರಲಿಲ್ಲ ಎಂದರು.

ಟೌನ್‌ಶಿಪ್ ಯೋಜನೆಗೆ ಶೇ. 80ರಷ್ಟು ರೈತರು ಒಪ್ಪಿದ್ದಾರೆಂದು ಹೇಳಿದ್ದಾರೆ. ಯಾವ ರೈತರು ನಿಮಗೆ ಒಪ್ಪಿಗೆ ನೀಡಿದ್ದಾರೆ. ಕೃಷಿ ಕೆಲಸ ಮಾಡಿಕೊಂಡು ಬದುಕುತ್ತಿರುವ ಸಣ್ಣ ಹಿಡುವಳಿದಾರರ ಹೊಟ್ಟೆ ಮೇಲೆ ಹೊಡೆಯಲು ನಾವು ಯಾವ ಕಾರಣಕ್ಕೂ ಬಿಡುವುದಿಲ್ಲ. ಯಾರದೋ ಹೆಸರಲ್ಲಿ ಭೂಮಮಿ ಖರೀದಿ ರಿಯಲ್ ಎಸ್ಟೇಟ್ ಮಾಡಲು ಮುಂದಾಗಿರುವ ನಿಮ್ಮ ಪ್ರಯತ್ನ ಸಫಲವಾಗುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರ ಯಾರಿಗೂ ಶಾಶ್ವತವಲ್ಲ, ದುಡ್ಡಿನ ಮದದಲ್ಲಿ ಮಾತನಾಡುವುದು ಬಿಟ್ಟು ಜನರು ಕೊಟ್ಟಿರುವ ಗೌರವವನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ನನ್ನ ಸ್ಟೇಟಸ್ ಬಗ್ಗೆ ಮಾತನಾಡುವ ನಿಮಗೆ ನಿಮ್ಮ ಸ್ಟೇಟಸ್‌ನ ಅರಿವಿರಬೇಕು. 136 ಶಾಸಕರನ್ನು ರಾಜ್ಯದ ಜನರು ಗೆಲ್ಲಿಸುವ ಮೂಲಕ ಭಿಕ್ಷೆ ನೀಡಿದ್ದಾರೆ. ಜನರ ಋಣ ತೀರಿಸುವತ್ತ ಮೊದಲು ಗಮನ ಹರಿಸಿ. 2028ಕ್ಕೆ ನೀವು ಮಾಜಿ ಆಗಿರುತ್ತೀರಿ. ಅಧಿಕಾರ ಯಾರಿಗೂ ಶಾಶ್ವತವಲ್ಲವೆಂಬ ಅರಿವು ಇದ್ದರೆ ಹೀಗೆಲ್ಲ ಮಾತನಾಡುತ್ತಿರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ತುಮಕೂರಿನಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಜೆಡಿಎಸ್ ಕೇವಲ 17 ಸ್ಥಾನ ಗೆದ್ದಿದೆ, ಪಕ್ಷದ ಕಥೆ ಮುಗಿದಿದೆ ಎಂದು ಮಾತನಾಡಿದ್ದಿರಿ. ನೀವು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೀರಾ. 136 ಶಾಸಕರನ್ನು ಹೊಂದಿರುವ ಉಪಮುಖ್ಯಮಂತ್ರಿಗಳು ತಮ್ಮ ಕಚೇರಿಯಲ್ಲಿ ಡಿಸೈನ್ ಬಾಕ್ಸ್ ಮಾಡಿಕೊಂಡಿದ್ದಾರೆ. ಸೋಷಿಯಲ್ ಮಿಡಿಯಾದಲ್ಲಿ ಡಿ.ಕೆ.ಶಿವಕುಮಾರ್ ಎಂಬ ನಾನು ಎಂಬ ಹಾಡುಗಳು ಆಗಾಗ ಬರುತ್ತವೆ, ಮುಂದಿನ ಸಾಲು ಏನೆಂದು ನನಗಂತು ಅರ್ಥವಾಗುತ್ತಿಲ್ಲವೆಂದು ವ್ಯಂಗ್ಯವಾಡಿದರು. ಹಾಸನ ಶಾಸಕ ಹೆಚ್.ಪಿ.ಸ್ವರೂಪ್ ಮತ್ತಿತರರಿದ್ದರು.

# ಬಲವಂತದ ದುಡಿಮೆಗೆ ಇನ್ನೂ ಬೀಳದ ಕಡಿವಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೈತುಂಬಾ ಸಂಬಳ, ಸುಸಜ್ಜಿತ ವಸತಿ ವ್ಯವಸ್ಥೆ ಕಲ್ಪಿಸುತ್ತೇವೆಂಬ ಬಣ್ಣದ ಮಾತುಗಳನ್ನು ನಂಬಿ ಹೊರ ರಾಜ್ಯ ಹಾಗೂ ಜಿಲ್ಲೆಗಳಿಂದ ಬರುವ ಕಾರ್ಮಿಕರನ್ನು ಅಕ್ರಮ ಬಂಧನದ ಮೂಲಕ ನರಕಯಾತನೆಗೆ ತಳ್ಳುವ ಜಾಲ ಸಕ್ರಿಯವಾಗಿದೆ ಎಂಬ ಆರೋಪಗಳು ಕೇಳಿಬಂದಿವೆ.

ಮೊದಲೆಲ್ಲಾ ಮಲೆನಾಡು ಭಾಗದ ಕಾಫಿ ತೋಟಗಳಲ್ಲಿ ಮಾತ್ರ ಹೊರ ರಾಜ್ಯದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಇತ್ತೀಚೆಗೆ ಕಟ್ಟಡ, ಶುಂಠಿ ಜಮೀನುಗಳಲ್ಲಿ ಕೆಲಸ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಕರೆದುಕೊಂಡು ಬರಲಾಗುತ್ತಿದೆ. ಆದರೆ ಕಾರ್ಮಿಕರ ಹಕ್ಕುಗಳನ್ನು ಸಂಪೂರ್ಣ ಗಾಳಿಗೆ ತೂರಿ ಅವರಿಗೆ ಚಿತ್ರಹಿಂಸೆ ನೀಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಸೋಮವಾರ ನಗರದ ಹೈಸ್ಕೂಲ್ ಫೀಲ್ಡ್‌ನಲ್ಲಿ 9 ಮಕ್ಕಳು ಸೇರಿ 35 ಕಾರ್ಮಿಕರನ್ನು ರಕ್ಷಿಸಲಾಗಿದೆ. ಏಪ್ರಿಲ್ 1ರಂದು ಅರಸೀಕೆರೆ ತಾಲ್ಲೂಕಿನ ಜಾವಗಲ್ ಹಾಗೂ ಮಾರ್ಚ್‌ನಲ್ಲಿ ಹಳೇಬೀಡು ಹೋಬಳಿಯಲ್ಲಿ ಅಕ್ರಮ ಬಂಧನದಲ್ಲಿದ್ದ ಕಾರ್ಮಿಕರನ್ನು ರಕ್ಷಿಸಲಾಗಿತ್ತು. ಕಳೆದ ವರ್ಷ ಹೊಳೆನರಸೀಪುರದ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಹೊರ ರಾಜ್ಯದ ಆರು ಕಾರ್ಮಿಕರನ್ನು ರಕ್ಷಿಸಿ ಅವರ ರಾಜ್ಯಕ್ಕೆ ಕಳುಹಿಸಿಕೊಡಲಾಗಿತ್ತು. ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇದ್ದು ಕಾನೂನು ಉಲ್ಲಂಘಿಸಿ ಕೆಲಸ ಮಾಡಿಸಿಕೊಳ್ಳುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಕಾರ್ಮಿಕ ಇಲಾಖೆ ಅಥವಾ




ಜಿಲ್ಲಾಡಳಿತ ಹಿಂದೇಟು ಹಾಕುತ್ತಿದೆಯೆಂಬ ಆರೋಪಗಳು ಕೇಳಿಬಂದಿವೆ.

## 250 ರೂ. ಸಂಬಳ-ಊರಿಗೆ ಹೋಗುವಂತಿಲ್ಲ

ಹಾಸನದಲ್ಲಿ ಸೋಮವಾರ ರಕ್ಷಿಸಲ್ಪಟ್ಟ ಕಾರ್ಮಿಕರ ಗೋಳು ಹೇಳತೀರದಾಗಿದೆ. ಬಿಎಸ್‌ಆರ್ ಎಂಬ ಪ್ರತಿಷ್ಠಿತ ಕಂಪನಿ ನಡೆಸುತ್ತಿರುವ ಕಟ್ಟಡ ಕಾಮಗಾರಿಗೆ ಕೆಲಸಕ್ಕೆಂದು ತೆಲಂಗಾಣದಿಂದ ಕಾರ್ಮಿಕರನ್ನು ಕರೆಸಿಕೊಳ್ಳಲಾಗಿದೆಯಂತೆ. ಆರು ತಿಂಗಳಿಂದ ಸರ್ಕಾರಿ ಕಚೇರಿ ಕಟ್ಟಡ ಕೆಲಸದಲ್ಲಿ ಕಾರ್ಮಿಕರು ನಿರತರಾಗಿದ್ದಾರೆ. ದಿನಕ್ಕೆ 550 ರೂ. ವೇತನ ನೀಡುವುದಾಗಿ ಹೇಳಿದ್ದ ಕಂಪನಿಯವರು ಕೇವಲ 250 ರೂ. ನೀಡುತ್ತಾರೆಂಬ ಮಾಹಿತಿ ಬಹಿರಂಗವಾಗಿದೆ. ಜಾತ್ರೆ, ಹಬ್ಬ ಹರಿದಿನಗಳಲ್ಲಿ ಊರಿಗೆ ಹೋದರೆ ವಾಪಾಸ್ ಬರುವುದಿಲ್ಲವೆಂಬ ಕಾರಣಕ್ಕೆ ವೇತನ ತಡೆ ಹಿಡಿಯುವುದು, ಎಲ್ಲರಿಗೂ ಒಟ್ಟಿಗೆ ರಜೆ ನೀಡದೆ ಇರುವುದು, ಮೊಬೈಲ್ ಬಳಕೆ ನಿಷೇಧ ಹೀಗೆ ನಾನಾ ಷರತ್ತುಗಳನ್ನು ವಿಧಿಸಿದ್ದಾರೆ. ಇಷ್ಟು ಮಾತ್ರವಲ್ಲದೆ ಒಂಬತ್ತು ಮಕ್ಕಳು ಪೋಷಕರ ಜೊತೆಗೆ ಇದ್ದು ಅವರ ಶೈಕ್ಷಣಿಕ ಭವಿಷ್ಯಕ್ಕೆ ಮಂಕು ಕವಿದಿದೆ. ನಗರದ ಹೃದಯ ಭಾಗದಲ್ಲೇ ಕಾರ್ಮಿಕರು ಅಕ್ರಮ ಬಂಧನದಲ್ಲಿದ್ದು ಯಾರಿಗೂ ಗೊತ್ತಾಗದೆ ಇರುವುದು ನಾಗರಿಕ ಸಮಾಜ ತಲೆ ತಗ್ಗಿಸುವ ವಿಚಾರವಾಗಿದೆ.

## ಅಸಹಾಯಕತೆ ದುರುಪಯೋಗ

ಕಾಫಿ ತೋಟ, ಶುಂಠಿ, ಕಟ್ಟಡ ಕೆಲಸಗಳಿಗೆ ಅಧಿಕ ಸಂಖ್ಯೆಯ ಕಾರ್ಮಿಕರು ಬೇಕಿರುವುದರಿಂದ ಅದಕ್ಕೆ ಜನರ ವ್ಯವಸ್ಥೆ ಮಾಡಿಕೊಡುವ ಒಂದು ವರ್ಗವೇ ಹುಟ್ಟಿಕೊಂಡಿದೆ. ಉದ್ಯೋಗದಾತ ಹಾಗು ಕಾರ್ಮಿಕರ ನಡುವೆ ಸೇತುವೆಯಾಗಿ ಕೆಲಸ ಮಾಡುವ ಅವರು ಕಮಿಷನ್ ಪಡೆದ ಜೀವನ ನಡೆಸುತ್ತಾರೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ದಿಕ್ಕು ದೆಸೆಯಿಲ್ಲದವರಂತೆ ನಿಂತ ಜನರಿಗೆ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಇಂತಹ ಅಮಾನುಷ ಕೆಲಸಗಳಲ್ಲಿ ತೊಡಗಿಸುತ್ತಾರೆ. ಯಾವುದಾದರೂ ಒಂದು ಉದ್ಯೋಗ ಸಿಕ್ಕರೆ ಸಾಕೆಂದು ಜನರು ಮೋಸದ ಬಲೆಗೆ ಬೀಳುತ್ತಾರೆ. ಒಂದು ಸಾರಿ ಈ ವ್ಯೂಹದೊಳಗೆ ಸಿಕ್ಕಿಬಿದ್ದರೆ ಬಿಡಿಸಿಕೊಳ್ಳುವುದು ಭಾರೀ ಕಷ್ಟವೆಂದು ಕಾರ್ಮಿಕರೊಬ್ಬರು ಹೇಳಿದರು.

## ಕಾರ್ಮಿಕ ಇಲಾಖೆ ಗಮನ ಹರಿಸಲಿ

ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡುವ ಇಲಾಖೆ ಅಧಿಕಾರಿಗಳು ಇಂತಹ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಸಂಶಯಾಸ್ಪದ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಮುಗ್ಧ ಜನರನ್ನು ಸಂಕಷ್ಟದಿಂದ ಪಾರು ಮಾಡಬಹುದು. ಕೇವಲ ಆರು ತಿಂಗಳಲ್ಲಿ ನಾಲ್ಕು ಕಡೆ ಜೀತ ಕಾರ್ಮಿಕರು ಪತ್ತೆಯಾಗಿದ್ದಾರೆಂದರೆ ಇನ್ನಷ್ಟು ಪರಿಶೀಲನೆ ಕೈಗೊಂಡರೆ ಸಾಕಷ್ಟು ಜನರನ್ನು ಸಂಕಷ್ಟದಿಂದ ಪಾರು ಮಾಡಬಹುದಾಗಿದೆ.

# ಭಾರತೀಯ ಸಂತರ ಮಹಾ ಸಮ್ಮೇಳನದಲ್ಲಿ ಪುಷ್ಪಗಿರಿ ಸ್ವಾಮೀಜಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ನವದೆಹಲಿಯಲ್ಲಿ ಭಾರತೀಯ ಸಂತರ ಮಹಾ ಪರಿಶಿಷ್ಟ ಸಮ್ಮೇಳನದಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಭಾಗವಹಿಸಿದ್ದಾರೆ.

ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಹಿರಿಯ ಸಂತರು, ಧರ್ಮಗುರುಗಳು ಮತ್ತು ಆಧ್ಯಾತ್ಮಿಕ ಮುಖಂಡರು ಈ ಮಹಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮಾಜದಲ್ಲಿ ಶಾಂತಿ, ಸೌಹಾರ್ದ ಮತ್ತು ಧಾರ್ಮಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಕುರಿತು ಸಮ್ಮೇಳನದಲ್ಲಿ ಆಳವಾದ ಚರ್ಚೆಗಳು ನಡೆದವು. ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಪ್ರಸ್ತುತ ಸಮಾಜಕ್ಕೆ ಅಗತ್ಯವಿರುವ ಆಧ್ಯಾತ್ಮಿಕ ಮಾರ್ಗದರ್ಶನ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಮಹತ್ವದ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ದೇಶದ ಸಮಗ್ರತೆ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ಸಂತರ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಈ ಸಮಾವೇಶವು ಒತ್ತಿಹೇಳಿತು. ರಾಷ್ಟ್ರ ರಾಜಧಾನಿಯಲ್ಲಿ ನಡೆದ ಈ ಸಂತರ ಮಹಾ ಸಂಗಮದಲ್ಲಿ ಪುಷ್ಪಗಿರಿ ಮಠದ ಶ್ರೀಗಳ ಉಪಸ್ಥಿತಿಯು ಮಠದ ಭಕ್ತರಲ್ಲಿ ಮತ್ತು ಧಾರ್ಮಿಕ ವಲಯದಲ್ಲಿ ಹರ್ಷವನ್ನು ಉಂಟುಮಾಡಿದೆ ಎಂದರು.

# ಅಗ್ನಿ ಅವಘಡ ಸಂತ್ರಸ್ತರಿಗೆ ಉಮೀದ್ ಸೇವಾ ಟ್ರಸ್ಟ್‌ನಿಂದ ನೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ಹೊಳೇಬೀದಿ ನಿವಾಸಿ ಮಂಜುನಾಥ್ ರಾವ್ ಅವರ ಪುತ್ರ ಸಂತೋಷ್ ಕುಮಾರ್ ಅವರಿಗೆ ಸೇರಿದ ಬಟ್ಟೆ ಅಂಗಡಿ ಬೆಂಕಿಗಾಹುತಿಯಾಗಿದ್ದು ಉಮೀದ್ ಸೇವಾ ಟ್ರಸ್ಟ್‌ನಿಂದ ಮಾಲೀಕರಿಗೆ ನೆರವು ನೀಡಲಾಯಿತು.

ವಿವಿಧೆಡೆ ಸಂಗ್ರಹಿಸಿದ್ದ 37706 ರೂ.ಗಳಿಗೆ ಸೇರಿಸಿ ಒಟ್ಟು 50 ಸಾವಿರ ರೂ. ಮೊತ್ತದ ಚೆಕ್ ಹಸ್ತಾಂತರಿಸಲಾಯಿತು.

ಇದೇ ರೀತಿಯಲ್ಲಿ ಈ ಹಿಂದೆ ಬಂಟೇನಹಳ್ಳಿಯ ಖಾಸಿಂಸಾಬ್ ಅವರ ಚಿಕಿತ್ಸೆಗೆ ಟ್ರಸ್ಟ್ ಮೂಲಕ 50 ಸಾವಿರ ರೂ. ನೆರವು ನೀಡಲಾಗಿದ್ದು, ಜೆಪಿ ನಗರದ ಒಬ್ಬ ವ್ಯಕ್ತಿ ತಮ್ಮ ಎರಡು ಕಿಡ್ನಿಗಳನ್ನು ಕಳೆದುಕೊಂಡ ದುಃಖದ ಪರಿಸ್ಥಿತಿಯಲ್ಲಿ ಇದ್ದಾಗ ಅವರಿಗೆ 20 ಸಾವಿರ ರೂ. ಆರ್ಥಿಕ ಸಹಾಯ ನೀಡಲಾಗಿತ್ತು. ಅಲ್ಲದೆ, ಕಳೆದ ಹಲವಾರು ತಿಂಗಳುಗಳಿಂದ ಬೇಲೂರು ತಾಲೂಕಿನ ನಿರ್ಗತಿಕ ನಾಲ್ಕು ಕುಟುಂಬಗಳಿಗೆ ಪ್ರತಿ ತಿಂಗಳು ಸುಮಾರು 2,000 ರೂ. ಮೌಲ್ಯದ ದಿನಸಿ ಪದಾರ್ಥಗಳನ್ನು ವಿತರಿಸಲಾಗುತ್ತಿದ್ದು, ಈ ಸೇವಾ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ ಎಂದು ಟ್ರಸ್ಟ್ ಸದಸ್ಯರು ತಿಳಿಸಿದರು.

ಉಮೀದ್ ಸೇವಾ ಟ್ರಸ್ಟ್ ಯಾವುದೇ ವೈಯಕ್ತಿಕ ಲಾಭದ ಉದ್ದೇಶವಿಲ್ಲದೆ ಕಾರ್ಯನಿರ್ವಹಿಸುತ್ತಿದ್ದು, ಟ್ರಸ್ಟ್ ಖಾತೆಗೆ ಬರುವ ಪ್ರತಿಯೊಂದು ರೂಪಾಯಿಯೂ ನೇರವಾಗಿ ಸಂತ್ರಸ್ತರಿಗೆ ತಲುಪಬೇಕು ಎಂಬ ಕಟ್ಟುನಿಟ್ಟಿನ ಬೈಲಾ ನಿಯಮದಡಿ ಸೇವಾ ಕಾರ್ಯಗಳನ್ನು ನಡೆಸುತ್ತಿದೆ. ಯಾವುದೇ ಹಣವನ್ನು ಬೇರೆ ಕಾರ್ಯಕ್ರಮಗಳಿಗೆ ಅಥವಾ ವೈಯಕ್ತಿಕ ಬಳಕೆಗೆ ಉಪಯೋಗಿಸದೇ, ಪಾರದರ್ಶಕತೆ ಮತ್ತು ಮಾನವೀಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದರು.

ಮುಂದಿನ ದಿನಗಳಲ್ಲಿ ಬೇಲೂರು ಹಾಗೂ ಬೇಲೂರು ತಾಲೂಕಿನಾದ್ಯಂತ ಸಾರ್ವಜನಿಕರು, ದಾನಿಗಳು ಮತ್ತು ಸಮಾಜದ ಮುಖಂಡರು ಉಮೀದ್ ಸೇವಾ ಟ್ರಸ್ಟ್‌ನ ಸೇವಾ ಕಾರ್ಯಗಳಿಗೆ ಬೆಂಬಲ ನೀಡಿ ಸಹಕರಿಸಬೇಕೆಂದು ಇದೇ ಸಂದರ್ಭದಲ್ಲಿ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿಗಳಾದ ಶ್ರೀಯುತ ಚಂದ್ರಮೋಳಿ ವರ್ತಕ ಸಂಘದ ಕಾರ್ಯದರ್ಶಿಗಳಾದ ಸೈಯದ್ ಅಶ್ಫಾಕ್ ಅಕ್ಬರ್ ಮೆಜೆಸ್ಟಿಕ್, ಫಾಸಿಲ್ ಅಹಮದ್, ಮುಂತಾದವರು ಹಾಜರಿದ್ದರು.

# ರಾಜ್ಯದಲ್ಲಿ ಇನ್ನೊಂದು ವಾರ ಮಳೆ ಮುಂದುವರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು : ಕಳೆದ ಒಂದು ವಾರದಿಂದ ರಾಜ್ಯದ ಬಹುತೇಕ ಕಡೆಗಳಲ್ಲಿ ಮಳೆಯಾಗುತ್ತಿದ್ದು, ಇನ್ನೂ ಒಂದು ವಾರ ಕಾಲ ಮಳೆ ಮುಂದುವರೆಯುವ ಮುನ್ಸೂಚನೆಗಳಿವೆ. ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಗಳಿದ್ದು, ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ನೀಡಿದೆ.

ಅವಧಿಗೂ ಮುನ್ನ ಈ ಬಾರಿ ಮುಂಗಾರು ಆಗಮಿಸುವ ಮುನ್ಸೂಚನೆ ಇದ್ದು, ಈಗಾಗಲೇ ಅದಕ್ಕೆ ಪೂರಕವಾದ ಸನ್ನಿವೇಶಗಳು ವಾತಾವರಣದಲ್ಲಿ ಕಂಡುಬರುತ್ತಿವೆ. ಇದರಿಂದ ಪೂರ್ವ ಮುಂಗಾರು ಚೇತರಿಸಿಕೊಂಡಿದ್ದು, ರಾಜ್ಯದ ಹಲವೆಡೆ ಮಳೆಯಾಗಿದೆ. ಬಂಗಾಳ ಕೊಲ್ಲಿಯಲ್ಲಿ ಉಂಟಾಗಿದ್ದ ವಾಯುಭಾರ ಕುಸಿತ ಹಾಗೂ ಒಳನಾಡಿನಲ್ಲಿ ಉಂಟಾಗಿರುವ ಮೇಲ್ಮೈ ಸುಳಿಗಾಳಿಯಿಂದಾಗಿ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಉತ್ತರ ಒಳನಾಡಿನಲ್ಲಿ ಮಳೆ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದ್ದು, ಮೇ 23ರವರೆಗೂ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ರಾಜ್ಯದಲ್ಲಿ ಒಣ ಹವೆ ಮುಂದುವರೆಯಲಿದೆ. ಮಧ್ಯಾಹ್ನದ ನಂತರ ಅಲ್ಲಲ್ಲಿ ಮೋಡ ಕವಿದ ವಾತಾವರಣ ಕಂಡುಬರಲಿದೆ. ಮಧ್ಯಾಹ್ನದ ಬಳಿಕ ಮತ್ತು ರಾತ್ರಿ ಸಮಯದಲ್ಲಿ ಮಳೆಯಾಗಲಿದೆ. ಪೂರ್ವ ಮುಂಗಾರು ಮಳೆಯಾಗಿರುವ ಹಿನ್ನೆಲೆಯಲ್ಲಿ ಬಹಳಷ್ಟು ಕಡೆಗಳಲ್ಲಿ ಮಿಂಚು, ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಗಳಿವೆ.

ಈ ಬಾರಿ ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆಯಾಗಿದೆ. ಮಾರ್ಚ್ ತಿಂಗಳು ಹೊರತುಪಡಿಸಿದರೆ, ಜನವರಿಯಿಂದ ಇದುವರೆಗೆ ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ.

# ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ವಿದ್ಯಾರ್ಥಿನಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಪಿಜೆ ಪಿಯು ಕಾಲೇಜಿನ ದ್ವಿತೀಯ ವರ್ಷದ ವಿಜ್ಞಾನ ವಿದ್ಯಾರ್ಥಿನಿ ಕೆ.ಹೆಚ್.ಸಿಂಚನಾ ಅವರು ರಾಷ್ಟ್ರ ಮಟ್ಟದ ಸಬ್ ಜೂನಿಯರ್ ಹಾಗೂ ಜೂನಿಯರ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಆಂಧ್ರ ಪ್ರದೇಶದ ಅಮಲಾಪುರಂನಲ್ಲಿ ಮೇ 15 ರಿಂದ 21ರ ವರೆಗೆ ಪಂದ್ಯಾವಳಿ ನಡೆಯುತ್ತಿದೆ. ಬಾಲ್ಯದಿಂದಲೇ ಕ್ರೀಡೆಯತ್ತ ಆಸಕ್ತಿ ಹೊಂದಿದ್ದ ಸಿಂಚನಾ, ಪವರ್ ಲಿಫ್ಟಿಂಗ್ ಕ್ಷೇತ್ರದಲ್ಲಿ ತಮ್ಮದೇಯಾದ ಛಾಪು ಮೂಡಿಸುತ್ತಿದ್ದಾರೆ.

ಕ್ರೀಡಾ ಕುಟುಂಬದ ಹಿನ್ನೆಲೆ ಹೊಂದಿರುವ ಸಿಂಚನಾ ಅವರ ತಂದೆ ಹನುಮಂತೇಗೌಡ ಕಮ್ಮರಿಗೆ ಕಾಮನ್ ವೆಲ್ತ್ ಸೇರಿ ಹಲವು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ವಿಜೇತರಾಗಿದ್ದಾರೆ.

ತಾಯಿ ಯಶೋಧ ಸಹ ರಾಷ್ಟ್ರಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕ ವಿಜೇತರಾಗಿದ್ದಾರೆ. ಇದೀಗ ಸಿಂಚನಾ ಕೂಡ ಹೆತ್ತವರ ಹಾದಿಯಲ್ಲೇ ಸಾಗುತ್ತಿದ್ದಾಳೆ.

2025ರ ಏಷ್ಯನ್ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸಿಂಚನಾ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದರು.

ಇದೀಗ ರಾಷ್ಟ್ರಮಟ್ಟದ ಚಾಂಪಿಯನ್‌ಶಿಪ್‌ನಲ್ಲಿ ಮತ್ತೊಮ್ಮೆ ಚಿನ್ನದ ಪದಕ ಗೆದ್ದು ಭವಿಷ್ಯದಲ್ಲಿ ಭಾರತ ಪ್ರತಿನಿಧಿಸುವ ಭರವಸೆಯ ಆಶಾ ಕಿರಣವಾಗಿ ಹೊರಹೊಮ್ಮಿದ್ದಾರೆ.

ವಿದ್ಯಾರ್ಥಿನಿ ಸಾಧನೆಗೆ ಕಾಲೇಜಿನ ಸಂಸ್ಥಾಪಕ ಡಿ.ಮುರಳಿ, ಆಡಳಿತ ಮಂಡಳಿ, ಜಿಲ್ಲೆಯ ಕ್ರೀಡಾಭಿಮಾನಿಗಳು, ಪವರ್ ಲಿಫ್ಟಿಂಗ್ ವಲಯ ಹಾಗೂ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

# ರೈಲಿನಲ್ಲಿ ಸಾಗಿಸುತ್ತಿದ್ದ ಮದ್ಯ ವಶಕ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಕ್ರಮವಾಗಿ ರೈಲಿನಲ್ಲಿ ಸಾಗಿಸುತ್ತಿದ್ದ ಅಂದಾಜು 5 ಸಾವಿರ ರೂ. ಮೌಲ್ಯದ ಮದ್ಯವನ್ನು ರೈಲ್ವೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಖಚಿತ ಮಾಹಿತಿ ಮೇರೆಗೆ ವಾಸ್ಕೋಡ ಗಾಮಾ-ಯಶವಂತಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ತಪಾಸಣೆ ನಡೆಸಿದಾಗ ಪದಾರ್ಥ ಸಿಕ್ಕಿದೆ. ಬಾಣಾವರದಿಂದ ಅರಸೀಕೆರೆ ಮಾರ್ಗಮಧ್ಯೆ ಸಾಮಾನ್ಯ ಬೋಗಿಯಲ್ಲಿ ವಾರಸುದಾರರಿಲ್ಲದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದೆ. ಪ್ರಯಾಣಿಕರನ್ನು ವಿಚಾರಿಸಿದಾಗ ಯಾರೂ ಸಹ ಆ ಚೀಲ ತಮ್ಮದೆಂದು ಒಪ್ಪಿಕೊಂಡಿಲ್ಲ.

ಪರಿಶೀಲನೆ ವೇಳೆ ವಿವಿಧ ಬ್ರ್ಯಾಂಡ್‌ಗಳ ಒಟ್ಟು 12 ಮದ್ಯದ ಬಾಟಲಿಗಳು ಪತ್ತೆಯಾಗಿದ್ದು, ಅವುಗಳ ಒಟ್ಟು ಮೌಲ್ಯ 5,123 ರೂ. ಎಂದು ಅಂದಾಜಿಸಲಾಗಿದೆ. ಅಬಕಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆಂದು ಮೈಸೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ಅವರು ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಮೇ-21

1542: ಸ್ಪ್ಯಾನಿಷ್ ಅನ್ವೇಷಕ ಹೆರ್ನಾಂಡೋ ಡಿ ಸೋಟೋ ಅಮೆರಿಕಾದ ಮಿಸ್ಸಿಸಿಪಿ ನದಿ ಪ್ರದೇಶದಲ್ಲಿ ನಿಧನರಾದರು.

1881: ಅಮೆರಿಕನ್ ರೆಡ್ ಕ್ರಾಸ್ ಸಂಸ್ಥೆಯನ್ನು ಕ್ಲಾರಾ ಬಾರ್ಟನ್ ಸ್ಥಾಪಿಸಿದರು.

1904: ಫೀಫಾ ಸಂಸ್ಥೆ ಸ್ಥಾಪನೆಯಾಯಿತು.

1927: ಚಾರ್ಲ್ಸ್ ಲಿಂಡ್‌ಬರ್ಗ್ ಮೊದಲ ಬಾರಿಗೆ ಏಕಾಂಗಿಯಾಗಿ, ನಿರಂತರವಾಗಿ ಅಟ್ಲಾಂಟಿಕ್ ಸಾಗರ ದಾಟಿದ ಐತಿಹಾಸಿಕ ವಿಮಾನಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

1932 ಅಮೆಲಿಯಾ ಇಯರ್‌ಹಾರ್ಟ್ ಅಟ್ಲಾಂಟಿಕ್ ಸಾಗರವನ್ನು ಏಕಾಂಗಿಯಾಗಿ ದಾಟಿದ ಮೊದಲ ಮಹಿಳಾ ಪೈಲಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.


1991: ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ತಮಿಳುನಾಡಿನ ಶ್ರೀಪೆರಂಬುದೂರಿನಲ್ಲಿ ಆತ್ಮಾಹುತಿ ದಾಳಿಯಲ್ಲಿ ಹತ್ಯೆಯಾದರು.

### ಜನನ

1921: ಆಂಡ್ರೇ ಸಖಾರೋವ್, ಭೌತಶಾಸ್ತ್ರಜ್ಞ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತರು

# 29.ಪುಟ್ಟಸ್ವಾಮಯ್ಯರ ಜನಪ್ರಿಯ ಕುರುಕ್ಷೇತ್ರ ನಾಟಕ

**-ಗೊರೂರು ಅನಂತರಾಜು**



ಕರ್ನಾಟಕ ರಂಗಭೂಮಿ ಕ್ಷೇತ್ರದಲ್ಲಿ ಬಿ.ಪುಟ್ಟಸ್ವಾಮಯ್ಯನವರ ಹೆಸರು ಚಿರಸ್ಥಾಯಿಯಾಗಿ ಅವರ ಕುರುಕ್ಷೇತ್ರ ನಾಟಕವಂತೂ ಮೈಸೂರು ಸೀಮೆಯಲ್ಲಿ ಇಂದಿಗೂ ಜನಪ್ರಿಯತೆ ಉಳಿಸಿಕೊಂಡಿದೆ. ಒಂದಲ್ಲ ಒಂದು ಊರು ಪೇಟೆ ಪಟ್ಟಣಗಳಲ್ಲಿ ಪ್ರದರ್ಶನಗೊಳ್ಳುತ್ತಿದೆ. ಪತ್ರಿಕೋದ್ಯಮಿ, ನಾಟಕಕಾರ, ಕಾದಂಬರಿಕಾರರಾಗಿ ಅವರು ಕನ್ನಡ ಸಾಹಿತ್ಯ ಮತ್ತು ರಂಗಭೂಮಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮಹತ್ವಪೂರ್ಣ. ಬಿ.ಪುಟ್ಟಸ್ವಾಮಯ್ಯನವರು ದಿ. 24 ಮೇ 1897ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಬಸಪ್ಪನವರು ರೇಷ್ಮೆ ವ್ಯಾಪಾರಿ, ತಾಯಿ ಹೆಸರು ಬಸಮ್ಮ. ಬೆಂಗಳೂರಿನ ಸುಲ್ತಾನ್ ಪೇಟೆ ಹಿಂದೂ ಎ.ವಿ.ಶಾಲೆಯಲ್ಲಿ ಆರಂಭಿಕ ಶಿಕ್ಷಣ ಪಡೆದರು. ನಂತರ ಸೈಂಟ್ ಜೋಸೆಫ್ ಕಾಲೇಜಿಗೆ ಸೇರಿದರು. 9ನೇ ತರಗತಿಯಲ್ಲಿದ್ದಾಗ ತಂದೆಯನ್ನು ಕಳೆದುಕೊಂಡರು. ಬಾಲ್ಯದ ದಿನಗಳಲ್ಲೇ ಓದುವ ಹವ್ಯಾಸವಿತ್ತು. ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ, ಬಂಗಾಳಿ, ಮರಾಠಿ ಭಾಷೆ ಕಲಿತಿದ್ದರು. ಕೆಲವು ಖಾಸಗಿ ಸಂಸ್ಥೆಗಳಲ್ಲಿ ದುಡಿದ ನಂತರ ಮೈಸೂರಿನಿಂದ ಪ್ರಕಟವಾಗುತ್ತಿದ್ದ ಮೈಸೂರು ಸ್ಟಾರ್ ವಾರಪತ್ರಿಕೆಯ ವರದಿಗಾರರಾಗಿ ಬೆಂಗಳೂರಲ್ಲಿ ಕಾರ್ಯರಂಭ ಮಾಡಿದರು. 1925ರಲ್ಲಿ ನಾರಾಯಣಶೆಟ್ಟರ ಸಂಪಾದಕತ್ವದ ನ್ಯೂ ಮೈಸೂರು ವಾರಪತ್ರಿಕೆಗೆ ಸೇರಿಕೊಂಡರು. ಆಗತಾನೇ ಆರಂಭವಾದ ಒಕ್ಕಲಿಗ ಪತ್ರಿಕೆಗೆ ಸಂಪಾದಕರಾದರು. ಆಮೇಲೆ ಜನವಾಣಿ ಸಂಪಾದಕತ್ವ ವಹಿಸಿಕೊಂಡರು. ಮುಂದೆ ಮಾತೃಭೂಮಿ ಪತ್ರಿಕೆಗೆ ಸೇರಿದರು. ಪ್ರಜಾವಾಣಿ ಪತ್ರಿಕೆ ಪ್ರಾರಂಭವಾಗಿ ಇವರು ಪ್ರಥಮ ಸಂಪಾದಕರಾದರು. ತಮ್ಮದೇ ಪ್ರತಿಭಾ ಎಂಬ ಮಾಸಪತ್ರಿಕೆ ನಡೆಸಿದರು. ಪತ್ರಿಕೋದ್ಯಮದಲ್ಲಿ ಕೈ ಸುಟ್ಟುಕೊಂಡು ನಂತರ ಕಾದಂಬರಿ ರಚನೆಗೆ ಪೆನ್ನು ಹಿಡಿದರು. 1953ರಲ್ಲಿ ಇವರ ಪ್ರಥಮ ಕಾದಂಬರಿ ರೂಪಲೇಖಾ ಪ್ರಕಟವಾಗುತ್ತದೆ. ಇದು ವಿಜಯನಗರದ ದೊರೆ ಪ್ರೌಢ ದೇವರಾಯನ ಕಾಲವನ್ನು ಕುರಿತ್ತಾದ್ದಾಗಿದೆ. ಇವರ ಮಲ್ಲಮ್ಮನ ಪವಾಡ ಕಾದಂಬರಿ ಪುಟ್ಟಣ ಕಣಗಾಲ್ ನಿರ್ದೇಶನದಲ್ಲಿ ಸಿನಿಮಾ ಜನಪ್ರಿಯವಾಯಿತು. ಇವರು ಬಸವಣ್ಣರನ್ನು ಕುರಿತು ಬರೆದ ಕೃತಿಗಳು ಉದಯರವಿ, ರಾಜ್ಯಪಾಲ, ಕಲ್ಯಾಣೇಶ್ವರ. ಇವರ ಇತರೆ ಕಾದಂಬರಿಗಳು ಅಭಿಸಾರಿಕೆ, ಸುಧಾಮುಖಿ, ರತ್ನಹಾರ, ಚಾಲುಕ್ಯ ತೈಲಪ, ತೇಜಸ್ವಿನಿ, ನಾಟ್ಯ ಮೋಹಿನಿ, ಪ್ರಭುದೇವ, ನಾಗಬಂಧ, ಮುಗಿಯದ ಕನಸು, ಕ್ರಾಂತಿ ಕಲ್ಯಾಣ, ಹೂವು ಕಾವು. ಜೀವನ ನಾಟಕ ಸುಭದ್ರಾ ಸಿನಿಮಾಗಳಿಗೆ ಸಹ ನಿರ್ದೇಶಕರಾಗಿ ಸಿನಿಮಾರಂಗದಲ್ಲೂ ಕೆಲಸ ಮಾಡಿದ್ದಾರೆ.

ಬಿ.ಪುಟ್ಟಸ್ವಾಮಯ್ಯನವರಿಗೆ ನಾಟಕದ ಮೇಲೆ ವಿಶೇಷ ಪ್ರೀತಿ ಇತ್ತು. ಇವರ ಮನೆಯ ಹಿಂಭಾಗ ತುಳಸಿ ತೋಟದಲ್ಲಿ ಪಾರ್ಸಿ ನಾಟಕಗಳು, ವರದಾಚಾರ್ಯರ ಕಂಪನಿ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ದ್ವಿಜೇಂದ್ರ ಲಾಲಾರಾಮ್ ನಾಟಕದ ಅನುವಾದ ಷಜಹಾನ್ ಇವರ ಮೊದಲ ನಾಟಕ. ಲೈಟ್ ಆಫ್ ಏಷಿಯಾ ಕೃತಿಯಿಂದ ಪ್ರೇರಣೆ ಪಡೆದು ರಚಿಸಿದ ನಾಟಕ ಗೌತಮಬುದ್ಧ. ಚಂದ್ರಕಲಾ ನಾಟಕ ಮಂಡಳಿ ಈ ಎರಡೂ ನಾಟಕಗಳನ್ನು ರಂಗದ ಮೇಲೆ ತಂದಿತು. ಕುರುಕ್ಷೇತ್ರ, ದಶಾವತಾರ, ಅಕ್ಕಮಹಾದೇವಿ ನಾಟಕಗಳನ್ನು ಗುಬ್ಬಿ ವೀರಣ್ಣನವರು, ಸಂಪೂರ್ಣ ರಾಮಾಯಣ, ಚಿರಕುಮಾರಸಭಾ ನಾಟಕಗಳನ್ನು ಕನ್ನಡ ಥಿಯೇಟರ್‌ನ ಎಂ.ಸಿ.ಮಹಾದೇವಯ್ಯನವರು ಯಶಸ್ವಿಯಾಗಿ ಪ್ರದರ್ಶಿಸಿದರು. ಅಕ್ಕಮಹಾದೇವಿ ಯಜ್ಞಸೇನಿ, ಸತೀ ತುಳಸಿ, ಪ್ರಚಂಡ ಚಾಣಕ್ಯ, ಜಯದೇವ, ಅಭಿನೇತ್ರಿ, ಚಂಗಲೆಯ ಬಲಿದಾನ, ಶ್ರೀದುರ್ಗ, ಬಭ್ರುವಾಹನ, ಬಿಡುಗಡೆಯ ಬಿಚ್ಚುಗತ್ತಿ, ರಾಣಿ, ತಾರಕ ವಧೆ, ಶಾಂತಿದೂತ ಬಾಹುಬಲಿ, ಹಿಟ್ಟಿನ ಕೋಳಿ, ಮೋಹಮುಕ್ತಿ ಹೀಗೆ ಪೌರಾಣಿಕ ಐತಿಹಾಸಿಕ, ಸಾಮಾಜಿಕ ನಾಟಕಗಳ ಕರ್ತೃ ಇವರು. ಚುರುಕಾದ ಸಂಭಾಷಣೆ, ಇಂಪಾದ ಸಂಗೀತ ಇವರ ನಾಟಕಗಳ ವೈಶಿಷ್ಟ್ಯ. ಪ್ರಭುದೇವ ಮತ್ತು ಬಸವೇಶ್ವರ 1965ರಲ್ಲಿ ಇವರ ಕ್ರಾಂತಿ ಕಲ್ಯಾಣಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಅದೇ ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿತು. ಇವರು ದಿನಾಂಕ 25 ಜನವರಿ 1984ರಂದು ದೈವಾಧೀನರಾದರು.

ನಾನೊಬ್ಬ ಸಾಮಾನ್ಯ ಮನುಷ್ಯ. ಪದವೀಧರನಲ್ಲ, ಪಂಡಿತನಲ್ಲ, ವಾಗ್ಮಿಯಲ್ಲ. ತಾರುಣ್ಯದಲ್ಲಿಯೇ ಪತ್ರಿಕೋದ್ಯಮಿಯಾಗಿ ಸಾಹಿತ್ಯಾಭಿರುಚಿ ಬೆಳೆದಂತೆ ನಾಟಕಕಾರನಾದೆ. ಕವಿ ಪ್ರತಿಭೆ ವಿಕಾಸಗೊಳ್ಳಲು ರಂಗಭೂಮಿಯಲ್ಲಿ ಅವಕಾಶವಿಲ್ಲವೆಂದು ಅರಿವಾದಾಗ ಕಾದಂಬರಿಗಳನ್ನು ಬರೆಯಲುತೊಡಗಿದೆ. ಈ ರೀತಿ ಪತ್ರಿಕೋದ್ಯಮ, ರಂಗಭೂಮಿ ಮತ್ತು ಕಾದಂಬರಿ ಕ್ಷೇತ್ರಗಳಲ್ಲಿ ತನಗಾದ ಸಿಹಿ ಕಹಿ ನೆನಪು ಅದೆಷ್ಟೋ! ಹೀಗೆ ತಮ್ಮ ಬಗ್ಗೆ ಬರೆದುಕೊಳ್ಳುವ ಬಿ.ಪುಟ್ಟಸ್ವಾಮಯ್ಯನವರು ಗುಬ್ಬಿ ಕಂಪನಿಗಾಗಿ ಬರೆದ ಕುರುಕ್ಷೇತ್ರ ನಾಟಕ ರಚಿತವಾಗಿದ್ದು 1933ರಲ್ಲಿ. ಆಗ ಮೊದಲನೇ ಮಹಾಯುದ್ಧ ಮುಗಿದು 2ನೇ ಯುದ್ಧ ಆರಂಭವಾಗುತ್ತಿದ್ದ ಸಂದರ್ಭ. ಇಡೀ ಜಗತ್ತು ಯುದ್ಧದಲ್ಲಿ ಭಾಗವಹಿಸುತ್ತಿದ್ದ ವೇಳೆ ಯುದ್ಧದ ವಿನಾಶವನ್ನು ಕುರಿತ ಜನತೆಯಲ್ಲಿ ಚಿಂತನೆ. ಯಾರದೋ ಅಧಿಕಾರ ಮೋಹಕ್ಕೆ ಜನಸಾಮಾನ್ಯರನ್ನು ಹೇಗೆ ವಿನಾಶದ ಅಂಚಿಗೆ ತಳ್ಳುತ್ತದೆ ಎಂಬುದರ ವಸ್ತು ವಿಷಯ. ಕುರುಕ್ಷೇತ್ರ ರಚನೆಯ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವವಿದೆ. ಮಹಾಭಾರತದ ಉದ್ಯೋಗ ಪರ್ವದ ಮುಖ್ಯ ಸಂದರ್ಭವನ್ನು ಆಯ್ಕೆ ಮಾಡಿಕೊಂಡ ಪುಟ್ಟಸ್ವಾಮಯ್ಯನವರು ನಾಟಕದ ಮೂಲಕ ಯುದ್ಧದಿಂದ ಆಗುವ ವಿನಾಶವನ್ನು ವಿವರಿಸುತ್ತಾರೆ. ಕೃಷ್ಣ ರಾಯಭಾರಕ್ಕೆ ಬಂದಾಗ ಯುದ್ಧವನ್ನೇ ಬಯಸುವ ದುರ್ಯೋಧನನನ್ನು ಕುರಿತು ಶ್ರೀಕೃಷ್ಣ ಹೇಳುವ ಯುದ್ಧ ನಿರಾಕರಣೆಯ ಮಾತುಗಳು ಸಾರ್ವಜನಿಕವಾದ ಮಾತುಗಳಾಗಿವೆ. ಟಿಕುಲವನ್ನು ರಕ್ಷಿಸುವ ಸಲುವಾಗಿ ಒಬ್ಬ ಮನುಷ್ಯನನ್ನೂ, ಗ್ರಾಮದ ರಕ್ಷಣೆಗಾಗಿ ಕುಲವನ್ನೂ, ದೇಶದ ರಕ್ಷಣೆಗಾಗಿ ಗ್ರಾಮವನ್ನೂ ಆತ್ಮರಕ್ಷಣೆಗಾಗಿ ಸರ್ವಸ್ವವನ್ನು ತ್ಯಜಿಸುವುದು ಧರ್ಮವೆಂದು ಶಾಸ್ತ್ರಗಳು ಹೇಳುವುವು. ಅನ್ಯೆಚ್ಛಿಕವಾದ ಯುದ್ಧದಿಂದ ಭರತವರ್ಷದ ವೀರಯೋಧನ ಪವಿತ್ರ ರಕ್ತವನ್ನು ಚೆಲ್ಲಬೇಕೆ? ಮಾನವ ಜಾತಿಯ ಈ ರಕ್ತಪ್ರಳಯದಿಂದ ಉದ್ಧರಿಸುವುದಾದರೆ ನಾನು ಹೇಳಿದಂತೆ ಮಾಡಿರಿ...

ಉದ್ಯೋಗ ಪರ್ವದ ಮುಖ್ಯ ಸಂಗತಿಯೇ ಯುದ್ಧ ತೀರ್ಮಾನ. ಈ ತೀರ್ಮಾನ ಸಂಪೂರ್ಣ ಒಪ್ಪಿಗೆ ಕೊಡದ ಹಠಸ್ವಭಾವದಿಂದಾಗಿ ಬಹುದೊಡ್ಡ ದುರಂತ ಜರುಗಿ ಹೋಗಿ ಅಲ್ಲಿ ನಿಷ್ಕಾರಣವಾಗಿ ಯುದ್ಧಕ್ಕೆ ಮತ್ತು ರಾಜ್ಯಕ್ಕೆ ಸಂಬಂಧವಿಲ್ಲದೆ ಸಾವಿರಾರು ಜನ ಹತರಾಗುತ್ತಾರೆ. ಎಲ್ಲಿಯೂ ತಾನು ಸೋಲುವುದಿಲ್ಲವೆಂಬ ಅಹಂಕಾರದಿಂದ ಮೆರೆದ ದುರ್ಯೋಧನ ತನ್ನ ಕಡೆ ಎಷ್ಟೇ ಪರಾಕ್ರಮಿಗಳಿದ್ದರೂ ಅವರ ಅಂತರಂಗದ ಬೆಂಬಲವಿಲ್ಲದೇ ನಿರ್ಣಾಯಕ ಸೋಲು ಅನುಭವಿಸುತ್ತಾನೆ. ತನ್ನ ಬಾಹ್ಯಶಕ್ತಿಯನ್ನು ಅತಿಯಾಗಿ ನಂಬಿದ ದುರ್ಯೋಧನ ಎಲ್ಲರನ್ನೂ ಕಳೆದುಕೊಂಡು ಜೀವಿತದ ಅಂತ್ಯದಲ್ಲಿ ವೈಶಂಪಾಯನ ಸರೋವರದ ಮುಂದೆ ತನ್ನ ದುರಂತದ ಸೂಚನೆಯನ್ನು ಕಂಡುಕೊಳ್ಳುತ್ತಾನೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಇದು ಪಾತಾಳ ಬಿಲಕ್ಕೆ ಬಾಗಿಲ್, ಇದು ಘೋರಾಂಧಕಾರದ ಕೂಪಕ್ಕೆ ಮಾಡಿದ ಬಾಗಿಲ್.. ದುರ್ಯೋಧನನ ಅವಸಾನವನ್ನು ಸೂಚಿಸುವಂತೆ ಕೊಳದ ವಿವರವೇ ವರ್ಣಿಸುತ್ತದೆ. ಮಹಾಭಾರತದ ಒಂದು ಮುಖ್ಯ ಭಾಗವನ್ನು ಆಯ್ಕೆ ಮಾಡಿಕೊಂಡು ಅಲ್ಲಿಯ ಕಾವ್ಯಭಾಗವನ್ನೇ ಸುಂದರ ಗದ್ಯಶೈಲಿಯಲ್ಲಿ ಕುರುಕ್ಷೇತ್ರವನ್ನು ರಚಿಸಿದ್ದಾರೆ. ಈ ನಾಟಕದ ಜನಪ್ರಿಯ ಸಾಧನೆಯಲ್ಲಿ ಗುಬ್ಬಿವೀರಣ್ಣನವರ ಪಾತ್ರವೂ ತುಂಬಾ ಮಹತ್ವದ್ದು. ಆ ಕಾಲಕ್ಕೆ 120 ಅಡಿ ಉದ್ದದ ವೇದಿಕೆ ನಿರ್ಮಿಸಿ ಯುದ್ಧ ಸಂದರ್ಭದಲ್ಲಿ ಆನೆ ಕುದುರೆಗಳನ್ನು ಸಹ ರಂಗದ ಮೇಲೆ ತಂದಿದ್ದು ಸಾಮಾನ್ಯ ಸಂಗತಿಯಲ್ಲ. ಅ.ನ.ಕೃ.ಅಭಿಪ್ರಾಯದಂತೆ ಭಾಷಾಧಾಟಿ ಮತ್ತು ವಸ್ತುವಿನ ಶ್ರೇಷ್ಠತೆ ಎರಡನ್ನೂ ಕಾಯ್ದುಕೊಂಡು ಜನರ ತಿಳುವಳಿಕೆಯನ್ನು ಹೆಚ್ಚಿಸುವಲ್ಲಿ ಸಫಲವಾಗಿದೆ. ನಾಟಕಕರ್ತರ ಭಾಷೆಯಲ್ಲಿರುವ ಕಾವ್ಯ ಮಾಧುರ್ಯ, ತೇಜಪುಂಜತೆ, ಗಾಂಭೀರ್ಯ ಶಕ್ತಿ ಮುಂದೆ ನಾಟಕೋಪಜೀವಿಗಳಿಗೆ ನಾಟಕ ಬರೆದುಕೊಡುವವರಿಗೆ ಮೇಲ್ಪಂಕ್ತಿಯಾಗಲು ಅರ್ಹವಾಗಿದೆ..

ಪೌರಾಣಿಕ ವಸ್ತುಗಳನ್ನು ರಂಗದ ಮೇಲೆ ತರುವಲ್ಲಿ ಪ್ರೇಕ್ಷಕರ ಕಣ್ಣೊಳಗೆ ಆಧುನಿಕ ದೃಷ್ಟಿಕೋನ ಇರಿಸಿಕೊಂಡೆ ಹೊಸ ಹೊಳಪನ್ನು ತಂದ ಪುಟ್ಟಸ್ವಾಮಯ್ಯನವರು ರಂಗಭೂಮಿಯ ಮೇಲೆ ಹೇರಳವಾಗಿ ಬಳಕೆಯಾಗುತ್ತಿದ್ದ ಸಂಗೀತವನ್ನು ಕಡಿಮೆ ಮಾಡಿ ಸಂಭಾಷಣೆಗಳು, ಅದರ ಹಿನ್ನೆಲೆಯಲ್ಲಿ ಘಟನೆಗಳು, ಘಟನೆಗಳ ಹಿಂದಿನ ಚಿಂತನೆ ಇವನ್ನೇ ಪ್ರಧಾನ ಮಾಡಿದರು. ಆದರೂ ಇಂದು ಈ ಕುರುಕ್ಷೇತ್ರ ಅನೇಕ ನಾಟಕ ನಿರ್ದೇಶಕರು, ಹಾರ್ಮೋನಿಯಂ ಮಾಸ್ಟರ್‌ಗಳು ಸಂಧರ್ಭಕ್ಕೆ ಸೂಕ್ತ ರೀತಿಯಲ್ಲಿ ಹೊಸ ಹೊಸ ರಂಗಗೀತೆಗಳನ್ನು ರಚಿಸಿ ಅಳವಡಿಸಿ ಇಂದು ಆ ನಾಟಕ 8 ಗಂಟೆಗೂ ಮೀರಿ ವಿಸ್ತಾರಗೊಂಡಿದೆ. ಅದೂ ಕೂಡ ಕುರುಕ್ಷೇತ್ರ ನಾಟಕದ ಜನಪ್ರಿಯತೆ ಉಳಿಸಿಕೊಂಡಿದೆ ಎಂಬುದನ್ನು ಮರೆಯುವಂತಿಲ್ಲ.

ಕರ್ನಾಟಕ ರಾಜ್ಯ ಬರಹಗಾರರ ಸಂಘ, ಹೂವಿನಹಡಗಲಿ ಮತ್ತು ಕದಂಬ ಸೈನ್ಯ ಹೊಳೆನರಸೀಪುರ ತಾಲ್ಲೂಕು ಘಟಕ ಹೊಳೆನರಸೀಪುರ ತಾ. ರಾಮೇನಹಳ್ಳಿ ಗ್ರಾಮದ ಕಲ್ಕೀ ಪರಂಜ್ಯೋತಿ ದೇವಸ್ಥಾನದಲ್ಲಿ ಮೇ 24ರಂದು ಬಿ.ಪುಟ್ಟಸ್ವಾಮಯ್ಯನವರ 129ನೇ ವರ್ಷದ ಜನ್ಮದಿನದ ಪುಣ್ಯಸ್ಮರಣೆ ಅವರ ಬದುಕು ಬರಹ ಉಪನ್ಯಾಸ, ರಾಜ್ಯಮಟ್ಟದ ಕವಿಗೋಷ್ಠಿ ಮತ್ತು ರಂಗಗೀತೆ ಗಾಯನ ಕಾರ್ಯಕ್ರಮ ಏರ್ಪಡಿಸಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248